# ದಿವಾಣಿ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಬಸವಕಲ್ಯಾಣ

ದಿನಾಂಕ 28-11-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | :- | ಕಾಶಿನಾಥ |
| ತಂದೆಯ ಹೆಸರು | :- | ವೆಂಕಟ |
| ವಯಸ್ಸು | :- | 39 ವರ್ಷಗಳು |
| ಉದ್ಯೋಗ | :- | - ಇಲ್ಲ - |
| ವಾಸ ಸ್ಥಳ | :- | ಮನ್ನಳ್ಳಿ |

## ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಚಾಸಾ-4 ನನಗೆ ಪರಿಚಯ. ಜಪ್ತು ಪಂಚನಾಮೆಗೆ ನನ್ನ ಸಹಿ ಇರುತ್ತದೆ.

1 ರಿಂದ 1½ ವರ್ಷದ ಹಿಂದೆ ಸಹಿಯನ್ನು ಮನ್ನಳ್ಳಿ ಬಾರ್ಡರ ಹತ್ತಿರವಿರುವ ದಾಬಾದ ಹತ್ತಿರ ಸಾಯಂಕಾಲ 7 ಗಂಟೆಗೆ ಮಾಡಿರುತ್ತೇನೆ. ಪೋಲಿಸರು ಸಹಿ ಮಾಡಲು ಹೇಳಿದ್ದು ಮಾಡಿರುತ್ತೇನೆ. ನನ್ನ ಸಮಕ್ಷಮ ಏನನ್ನು ಜಪ್ತು ಮಾಡಿಕೊಂಡಿರುವುದಿಲ್ಲ. ಯಾವ ಕಾರಣಕ್ಕೆ ಸಹಿ ಪಡೆದಿರುವರೆಂದು ನನಗೆ ಗೊತ್ತಿಲ್ಲ. ಆ ದಿನ ನನ್ನ ಜೊತೆ ಯಾರು ಇರಲಿಲ್ಲ. ನನ್ನ ಸಹಿ ಇರುವ ಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು ಸಹಿ ನಿಪಿ-2(ಸಿ) ಎಂದು ಗುರುತಿಸಲಾಯಿತು.

***(ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿದಾರ ಅಂತಾ ಪರಿಗಣಿಸಲು ಪರವಾನಿಗೆ ಕೇಳಿರುತ್ತಾರೆ. ಅನುಮತಿಸಲಾಯಿತು).***

## ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ :-

ದಿನಾಂಕ 12-8-2021 ರಂದು 3 ರಿಂದ 3-45 ಗಂಟೆಯವರೆಗೆ ಸಂಚಾರಿ ಪೋಲಿಸ ಠಾಣೆಯ ಆವರದಲ್ಲಿ ಜಪ್ತು ಪಂಚನಾಮೆ ಮಾಡಿ ನನ್ನ ಸಮಕ್ಷಮ ದ್ವಿಚಕ್ರ ವಾಹನ ಸಂಃ ಕೆಎ-56-ಜೆ-8039 ಅನ್ನು ಜಪ್ತು

ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಆ ದಿನ ನನ್ನ ಜೊತೆ ಚಾಸ-4 ಹಾಜರಿದ್ದರೆಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳುಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿ ಪರ ಶ್ರೀ ಆರ್.ಎಸ್.ಎಮ ವಕೀಲರು ಪಾಟಿ ಸವಾಲು ಇಲ್ಲವೆಂದು ನೀವೇದಿಸಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇದೆ)

ದಿವಾಣಿ ನ್ಯಾಯಾಧೀಶರು
ಬಸವಕಲ್ಯಾಣ